

## ಕಲೆಯಾಗಿ ಅರಳಿದ ಒಣಗಿದ ಬಿದಿರು

ಪರಿಸರ ಸಮತೋಲನದಲ್ಲಿ ತನ್ನದೇ ಆದ ವಿಶಿಷ್ಟತೆಯೊಂದಿಗೆ ಗುರುತಿಸಿಕೊಳ್ಳುವ, ವೇಗವಾಗಿ ಬೆಳೆಯುವ ಹುಲ್ಲು ಜಾತಿಯ ಸಸ್ಯ ಬಿದಿರು. ಮನೆ, ಪೀಠೋಪಕರಣಗಳ ನಿರ್ಮಾಣದಲ್ಲಿ, ಕಾಗದ, ಬಟ್ಟೆ ತಯಾರಿಕೆಗೆ ಬಳಸುವ ಬಿದಿರು ಹೆಚ್ಚಿನ ಆಮ್ಲಜನಕವನ್ನು ಕೊಡುವುದರೊಂದಿಗೆ ಮಣ್ಣಿನ ಸವೆತವನ್ನು ತಡೆಯುವ ಅದ್ಭುತ ಗುಣವನ್ನೂ ಹೊಂದಿದೆ. ಕಳೆದ ವರ್ಷ ಮಲೆನಾಡಿನಲ್ಲಿ ಸುರಿದ ಭಾರೀ ಮಳೆಗೆ, ಕೊಪ್ಪದ ಜಾಸ್ಮಿನ್ ದಯಾಕರ್ ಅವರ ತೋಟದ ಅಂಚಿನಲ್ಲಿದ್ದ ಸಣ್ಣ ಬಿದಿರ ಉಡಿಯೊಂದು ಮಗುಚಿ ಬಿದ್ದಿತ್ತು. ಹಾಗೆ ಬಿದ್ದ ಬಿದಿರನ್ನು ಕಡಿದು ಒತ್ತಟ್ಟುಗೊಳಿಸುವಾಗ, ಗಟ್ಟಿಯಾದ ಬಿದಿರಿನ ತುಂಡುಗಳನ್ನು ಒಂದೆಡೆ ಸೇರಿಸಿಡಲಾಯಿತು. ಬೇಲಿ ಗೂಟವಾಗಿ ಇಲ್ಲವೇ ಉರುವಲಾಗಿ ಬಳಸಬಹುದು ಎಂಬುದು ಆಗಿನ ಯೋಚನೆಯಾಗಿತ್ತು.





ನಿತ್ಯ ಹೊಸತನ್ನು ಅರಸುವ ಗುಣವಿರುವ ಜಾಸ್ಮಿನ್ ದಯಾಕರ್ ಅವರು ಬಿದಿರಿನ ತುಂಡುಗಳಿಗೆ ಕಲೆಯ ಸ್ಪರ್ಶ ನೀಡುವ ಚಿಂತನೆ ಮಾಡಿ, ಮೊದಲಿಗೆ ಸಣ್ಣ ಸಣ್ಣ ಹೂವಿನಾಕೃತಿಯ (ಕಮಲದಾಕೃತಿ) ಹಣತೆಗಳನ್ನು ನಿರ್ಮಿಸಿದರು. ಹತ್ತು ಹಣತೆಗಳನ್ನು ತಾವಿರುವ ಸ್ವ–ಸಹಾಯ ಸಂಘದ ಮಾಸಿಕ ಸಂತೆಯಲ್ಲಿ ಪ್ರದರ್ಶನಕ್ಕಿಟ್ಟರು. ಜನ ಮನ ಸೆಳೆದ ಈ ಹಣತೆಗಳು ಒಳ್ಳೆಯ ದರದಲ್ಲಿ ಮಾರಾಟವಾದವು. ಇದರಿಂದ ಪ್ರೇರಣೆ ಗೊಂಡ ಜಾಸ್ಮಿನ್ ಅವರು ಮತ್ತೆ ಹಣತೆ, ಅರಿಶಿನ ಕುಂಕುಮ ಬಟ್ಟಲು, ತರಹೇವಾರಿ ದೀಪಗಳನ್ನು ನಿರ್ಮಿಸಿ ಅವುಗಳಿಗೆ ವಿದ್ಯುತ್ ಬಲ್ಬ್ ಜೋಡಿಸುವ ವ್ಯವಸ್ಥೆಯನ್ನು ಮಾಡಿದರು. ಇವೆಲ್ಲವೂ ಚಿಕ್ಕಮಗಳೂರು, ಬೆಂಗಳೂರು, ದೆಹಲಿ ಮುಂತಾದ ಕಡೆಗಳಲ್ಲಿ ಪ್ರದರ್ಶಿತಗೊಂಡು ಮಾರಾಟವಾದವು. ಇದೀಗ ಜಾಸ್ಮಿನ್ ದಯಾಕರ್ ಕರಟ (ತೆಂಗಿನ ಚಿಪ್ಪು), ಹಿಟ್ಟುಂಡೆ ಹುಲ್ಲು, ಬಿದಿರು ಮುಂತಾದವುಗಳನ್ನು ಬಳಸಿ, ಪರಿಸರ ಸ್ನೇಹಿ ಕರಕುಶಲ ವಸ್ತುಗಳನ್ನು ಸ್ವತಃ ತಯಾರಿಸಿ, ಮಾರಾಟ ಮಾಡುವುದನ್ನೇ ಉದ್ಯೋಗವನ್ನಾಗಿಸಿಕೊಂಡು, ಅದಕ್ಕೆ ಬೇಕಾದ ಅಗತ್ಯ ಮಾರ್ಗದರ್ಶನ, ಆರ್ಥಿಕ ಸಾಲವನ್ನು ಸರ್ಕಾರಿ ಸ್ವಾಮ್ಯದ ಒಕ್ಕೂಟದಿಂದ ಪಡೆದು ಸ್ವ–ಉದ್ಯೋಗ ನಿರತರಾಗಿದ್ದಾರೆ.

–ಎಸ್.ಎನ್. ಚಂದ್ರಕಲಾ, ಕೊಪ್ಪ

## ರೈತರ ಯಾಂತ್ರಿಕ ಸುಗ್ಗಿ

ಸಾಗರ ತಾಲ್ಲೂಕಿನ ತಾಳಗುಪ್ಪ ಗದ್ದೆ ಬಯಲಿನ ನಡುವೆ ಹಾದು ಹೋಗಿರುವ ರಾಜ್ಯ ಹೆದ್ದಾರಿಯಲ್ಲಿ ಸಾಗುವಾಗ, ಸುತ್ತೆಲ್ಲ ‘ದೊಡ್ಡ ಗದ್ದೆ ಬಯಲು’ ಎಂದೇ ಪ್ರಸಿದ್ಧಿ ಪಡೆದ ಈ ತಾಲಗುಪ್ಪ ಬಯಲಲ್ಲಿ ರೈತರು ಯಂತ್ರದ ಸಹಾಯದಿಂದ ಸುಗ್ಗಿ ಮಾಡಿಸುತ್ತಿರುವ ದೃಶ್ಯ ಗಮನ ಸೆಳೆಯಿತು. ವಿಶೇಷವೆಂದರೆ ದನದ ಮೇವಿಗಾಗಿ ಮೊದಲೆಲ್ಲಾ ಕಾಣುತ್ತಿದ್ದ ‘ತೇರು’ ಮಾದರಿಯ ಹುಲ್ಲಿನ ಗೊಣಬೆಗಳ ಬದಲಿಗೆ, ಈಗ ಗದ್ದೆ ಬಯಲಿನ ತುಂಬಾ ಸಾವಿರಾರು ಸಂಖ್ಯೆಯ ‘ಹುಲ್ಲಿನ ರೋಲ್’ಗಳು ಹಾಸಿಗೆಯಂತೆ ಬಿದ್ದುಕೊಂಡಿದ್ದು, ಯುದ್ಧ ಭೂಮಿಯ ಫಿರಂಗಿಗಳ ಹಾಗೆ ಕಾಣುತ್ತಿತ್ತು. ಇದು ಭತ್ತ ಕೃಷಿಯ ಸಾಂಪ್ರದಾಯಿಕ ಚಟುವಟಿಕೆಯಲ್ಲಿನ ಬದಲಾವಣೆಯನ್ನು ಹೇಳುತ್ತಿತ್ತು. ಕಾಲದ ಬದಲಾವಣೆ ಎನಿಸಿದರೂ, ಅನೇಕ ತಲೆಮಾರುಗಳಿಂದ ಜನರು ಸುಗ್ಗಿ ಕಾಲದಲ್ಲಿ ಕಾಣುತ್ತಿದ್ದ ಇಂತಹ ಸಾಂಪ್ರದಾಯಿಕ ಪರಿಕಲ್ಪನೆಯೇ ಬದಲಾಗಿದ್ದು, ಈಗಿನದ್ದು ಕೇವಲ ‘ಯಾಂತ್ರಿಕತೆ’ ಅಷ್ಟೇ ಆಗಿ ಕಾಣುತ್ತಿದೆ. ಹಾಗೆಯೇ ಪಕ್ಕದಲ್ಲಿ ರೈತರೊಬ್ಬರು ಹುಲ್ಲಿನ ಮೆದೆಯನ್ನು ಒಪ್ಪವಾಗಿ ಕಟ್ಟುತ್ತಿದ್ದದ್ದು ಕಂಡಿತು. ಗ್ರಾಮೀಣ ಜನರ ದೈನಂದಿನ ಜೀವನದ ಬಗ್ಗೆ ಅರಿವು ಮೂಡಿಸುವ ಇಂತಹ ಅನೇಕ ದೃಶ್ಯಾವಳಿಗಳು ಈಗ ಹಂತಹಂತವಾಗಿ ಮರೆಯಾಗುತ್ತಿವೆ.



–ಜಿ.ಎಂ.ಬೊಮ್ನಳ್ಳಿ, ಶಿರಸಿ

## ಪ್ರಕೃತಿಯ ಅದ್ಭುತ ‘ಕಡ್ಡಿ ಕೀಟ’

ಸಂಡೂರಿನ ಸಮೀಪವಿರುವ ತಿಮ್ಮಪ್ಪನ ಬೆಟ್ಟದ ಚಾರಣ ಮುಗಿಸಿ ಹಿಂದಿರುಗಿ ಬರುವಾಗ, ಸಹ ಚಾರಣಿಗರ ಜಾಕೆಟ್‌ಗೆ ಒಣ ಹುಲ್ಲಿನ ಕಡ್ಡಿ ಅಂಟಿಕೊಂಡಿರುವುದು ಕಾಣಿಸಿತು. ಕೊಡವಲು ಅಣಿಯಾದಾಗ ಅಚ್ಚರಿಯೆಂಬಂತೆ ಸಣ್ಣ ಚಲನೆ ಕಾಣಿಸಿಕೊಂಡಿತು. ಸಮೀಪ ಹೋಗಿ ನೋಡಿದಾಗ ಅದು ಹುಲ್ಲಿನ ಕಡ್ಡಿಯಂತೆ ಕಾಣುವ ಕೀಟವಾಗಿತ್ತು. ಸಾಮಾನ್ಯವಾಗಿ ಜನರನ್ನು ಗೊಂದಲಕ್ಕೀಡು ಮಾಡುವ ಈ ಕೀಟವನ್ನು ‘ಕಡ್ಡಿ ಕೀಟ’ (Stick Insect) ಎಂದು ಕರೆಯಲಾಗುತ್ತದೆ. ಈ ಕೀಟದ ವಿಶೇಷತೆ ಎಂದರೆ, ತನ್ನ ದೇಹವನ್ನು ಸುತ್ತಮುತ್ತಲಿನ ಕಡ್ಡಿ, ಹುಲ್ಲು ಅಥವಾ ಕೊಂಬೆಗಳಂತೆ ತೋರಿಸಿಕೊಂಡು ಶತ್ರುಗಳಿಂದ ರಕ್ಷಿಸಿಕೊಳ್ಳುವ ಅದ್ಭುತ ಕೆಮೋಫ್ಲಾಜ್ (Camouflage) ಸಾಮರ್ಥ್ಯವನ್ನು ಹೊಂದಿರುತ್ತದೆ.

ಸಿಪಿಲೊಯ್ಡಿಯಾ (Sipyloidea) ಎಂದು ವೈಜ್ಞಾನಿಕವಾಗಿ ಗುರುತಿಸುವ ಬೂದು ಬಣ್ಣದ ಈ ಕೀಟ ಎರಡು ಅಂಗುಲ ಉದ್ದ ಹಾಗೂ ಒಣ ಹುಲ್ಲಿನಂತಿದ್ದು, ಮೊಟ್ಟ ಮೊದಲ ಬಾರಿಗೆ ನೋಡುವವರು ಅದು ಕೇವಲ ಸಣ್ಣ ಒಣಕಡ್ಡಿಯೆಂದೇ ಭಾವಿಸುತ್ತಾರೆ. ಗಾಳಿಯಲ್ಲಿ ಒಣ ಹುಲ್ಲಿನ ಕಡ್ಡಿ ತೂಗುವಂತೆ ನಿಧಾನವಾಗಿ ಚಲಿಸುವ ಈ ಕೀಟ, ಪರಿಸರದೊಂದಿಗೆ ಬೆರೆತು ಕಾಣಿಸುವ ಅಪರೂಪದ ಪ್ರಕೃತಿ ಕಲೆಯ ಉದಾಹರಣೆ. ಮಾನವರಿಗೆ ಯಾವುದೇ ಹಾನಿ ಮಾಡದ ಈ ಕೀಟವು ಪರಿಸರ ವ್ಯವಸ್ಥೆಯ ಸಮತೋಲನಕ್ಕೆ ಸಹಕಾರಿ. ಜೀವ ವೈವಿಧ್ಯಕ್ಕಾಗಿ ಪ್ರಸಿದ್ಧಿಯಾಗಿರುವ ಸಂಡೂರು ಪ್ರದೇಶ ಮತ್ತು ತಿಮ್ಮಪ್ಪನ ಬೆಟ್ಟದ ಅರಣ್ಯ ವಲಯದಲ್ಲಿ ಇಂತಹ ಕೀಟ ಕಾಣಿಸಿರುವುದು ಇದೇ ಮೊದಲು.



–ಜಿ. ನಾಗೇಂದ್ರ, ಕಾಪೂರು